ಮೊದಲನೆಯದಾಗಿ ಈ ಶ್ರೀಭೃಂಗ ಬಹಳ ವಿಶಿಷ್ಟವಾದದ್ದು. ಈ ಭೃಂಗ ನೇರವಾಗಿ ಸಾರವುಳ್ಳಂತಹ ದೇವಿಯ ಪದಪಂಕಜವನ್ನು ಹೊಕ್ಕು ಸಾರತಮವಾದ ಸುಧೆಯನ್ನು ಪಾನ ಮಾಡಿರುವುದು. ಬಹುಶಃ ಈ ದೃಶ್ಯವನ್ನು ಮೊದಲೇ ಮನಗಂಡು ಭಕ್ತಕವಿ ಕಮಲಾಕಾಂತನು "ಸಾಗುತಿಹುದು ಚಿತ್ತ ಭೃಂಗ" ಎಂಬ ಹಾಡನ್ನು ರಚಿಸಿದನೊ ಏನೋ!

ಎರಡನೆಯದಾಗಿ ಈ ಶ್ರೀಭೃಂಗವು ಅಷ್ಟಕ್ಕೇ ತೃಪ್ತವಾಗದೆ, ಹಲವಾರು ಪುಷ್ಪಗಳನ್ನು ಹೊಕ್ಕು ಸುಧಾಪಾನ ಮಾಡಿರುವುದು. ಆ ಎಲ್ಲಾ ಪುಷ್ಪಗಳು ಒಂದೊಂದು ಧರ್ಮವೇ ಸರಿ. ಹಿಂದೂ, ಕ್ರೈಸ್ತ, ಇಸ್ಲಾಂ, ಸಿಖ್ ಧರ್ಮಗಳೆಂಬ ಪುಷ್ಪಗಳ ಮಕರಂದವನ್ನು ಹೀರಿರುವುದು. ಈ ಎಲ್ಲ ಪುಷ್ಪಗಳ ಮಕರಂದವನ್ನು ಮಧುವಾಗಿಸಿ, ಒಂದು ವಿಶಿಷ್ಟವಾದ ಸುಧಾರಸವನ್ನು ತಯಾರು ಮಾಡಿರುವುದು. ಒಂದೊಂದು ಪುಷ್ಪದ ಮಧುವನ್ನು ಹೀರಿರುವ ಒಬ್ಬೊಬ್ಬ ಮಹನೀಯರು "ಆಚಾರ್ಯ" ಎಂದೆನಿಸುವರು. ಹಾಗಾದರೆ ಈ ಎಲ್ಲಾ ಪುಷ್ಪಗಳ ಸುಧಾರಸವನ್ನು ತನ್ನದಾಗಿಸಿಕೊಂಡಿರುವ ಈ ಭೃಂಗಕ್ಕೆ **ಆಚಾರ್ಯಾಣಾಂ ಮಹಾಚಾರ್ಯಃ** ಎಂಬ ಸ್ತೋತ್ರವಾಣಿ ಸೂಕ್ತವಾಗಿದೆಯಲ್ಲವೇ? ಇನ್ನೊಂದು ವೈಶಿಷ್ಟ್ಯವೆಂದರೆ ಈ ಭೃಂಗದ ಬಳಿಯೇ ಪುಷ್ಪಗಳೆಲ್ಲವೂ ಬಂದವು. ಈ ಶ್ರೀಭೃಂಗ ವಿವಿಧ ಪುಷ್ಪಗಳನ್ನರಸಿ ಎಲ್ಲೂ ಹಾರಲಿಲ್ಲ.

ಮೂರನೆಯದಾಗಿ ಈ ಶ್ರೀಭೃಂಗವು ಮಾನವ ರೂಪದಲ್ಲಿ ಶ್ರೀಕಾಳಿಕಾದೇವಿಯನ್ನು ಅರ್ಚಿಸಿ, ಧ್ಯಾನಿಸಿ, ಭಜಿಸಿ ತಾನೇ ದೈವತ್ವಕ್ಕೆ ಏರಿ ಅರ್ಚಾವತಾರವಾಗಿ ವಿಜೃಂಭಿಸಿದೆ, ಅಸಾಧ್ಯವಾದುದನ್ನು ಸುಸಾಧ್ಯವಾಗಿಸಿದೆ. ಎಲ್ಲರೂ ಬ್ರಹ್ಮತ್ವಕ್ಕೆ ಏರಬಹುದು ಎಂಬ ಸತ್ಯವನ್ನು ಸಾರಿ ಸಾರಿ ಹೇಳಿದೆ. ಕಾಮಕಾಂಚನವೆಂಬ ವಿಷಯ ಕುಸುಮದ ಬಳಿ ಎಂದೂ ಸುಳಿದಾಡದ ಶ್ರೀಭೃಂಗವಿದು. ಮನುಷ್ಯರನ್ನು ನೋಡಿದ ಮಾತ್ರದಿಂದಲೇ ಅವರ ಚಿತ್ತಸಾರವನ್ನು ಕಂಡುಕೊಳ್ಳುವ ಹಾಗೆಯೇ ಉದ್ಧರಿಸುವ ಶಕ್ತಿ ಈ ಭೃಂಗಕ್ಕೆ ಸರ್ವಸಹಜ. ಇದರಿಂದಲೇ ಈ ಶ್ರೀಭೃಂಗವು ನರೇಂದ್ರನನ್ನು ನೋಡಿ "ಇದು ಸಹಸ್ರದಳ ಪದ್ಮ" ಎಂದು ಸಂತೋಷಿಸಿದ್ದು, ತಾಯಿಯ ಪಾದಗಳಲ್ಲಿ ಅದನ್ನು ಅರ್ಪಿಸಿ, ಅನಂತರ ಆ ಸಹಸ್ರದಳ ಪದ್ಮದ ಸಾರವನ್ನು ಮಧುವಾಗಿಸಿ, ನರೇಂದ್ರನನ್ನು ವಿವೇಕ-ಆನಂದದಲ್ಲಿ ಮುಳುಗಿಸಿರುವುದು.

ಈ ಶ್ರೀಭೃಂಗವನ್ನು ನೋಡಿದವರೆಲ್ಲ, ಸ್ಪರ್ಶಿಸಿದವರೆಲ್ಲ ಒಂದೊಂದು ಬಗೆಯ ಅಪೂರ್ವ ಆನಂದ ಹೊಂದಿರುವುದು ಗಮನಾರ್ಹ. ಸಾಮಾನ್ಯವಾಗಿ ಭೃಂಗವನ್ನು ಕಂಡರೆ ಭಯವಾಗುವುದು. ಆದರೆ ಈ ಶ್ರೀಭೃಂಗವನ್ನು ಕಂಡರೆ ಆನಂದವಾಗುವುದು. ಬರಿಯ ಆನಂದವಲ್ಲ, ಬ್ರಹ್ಮಾನಂದ, ವಿವೇಕಾನಂದ, ಶಿವಾನಂದ, ಪ್ರೇಮಾನಂದ, ಅದ್ಭುತಾನಂದ, ಎಷ್ಟು ಆನಂದ! ಪಾರವಿಲ್ಲದ ಪರಮಾನಂದವಾಗುವುದು ಈ ಶ್ರೀಭೃಂಗದ ಸಂಬಂಧದಿಂದ.

ನಾಲ್ಕನೆಯದಾಗಿ ಈ ಶ್ರೀಭೃಂಗ ಬರಿಯ ಮಧುಪಾನ ಮಾಡಿ ಆನಂದದಲ್ಲಿರುವುದಷ್ಟೆ ಅಲ್ಲ. ಮತ್ತೆ ಮತ್ತೆ ಪಾನಗೈದು ಉನ್ಮತ್ತವಾಗಿದೆ. ಇದು ಮದ್ಯಪಾನ ಮಾಡಿದವರ (ಗಿರೀಶಚಂದ್ರ ಮೊದಲಾದವರ) ಪಾಲಿಗೂ ಆಶ್ಚರ್ಯಕರ ಸಂಗತಿಯಾಗಿದೆ. ಆ ಉನ್ಮಾದಾವಸ್ಥೆಯನ್ನು ಸತ್‌ಪಾತ್ರರಿಗೆ ಕೊಡುವ ಅದ್ಭುತ ಶಕ್ತಿಯುಳ್ಳದ್ದಾಗಿದೆ. ಅಕ್ಷಯವಾದ ಸುಧಾರಸವಿರುವ ಭಂಡಾರದ ಕೀಲಿಕೈ ಶ್ರೀಭೃಂಗದ್ದು. ಈ ಶ್ರೀಭೃಂಗ ಇಚ್ಛಿಸಿದ್ದೇ ಆದರೆ, ಆ ಸಂಪೂರ್ಣ ಭಂಡಾರ ನಮ್ಮ ದಾಗಿಸುವುದರಲ್ಲಿ ಅಚ್ಚರಿ ಏನಿಲ್ಲ. ಆದರೆ ಈ ಶ್ರೀಭೃಂಗದ ಮೇಲೆಯೇ ನಮ್ಮ ಮನಸ್ಸು ಕೇಂದ್ರೀಕೃತವಾದಾಗ ಆ ಭಂಡಾರ ಕ್ಕಿಂತಲೂ ಹೆಚ್ಚು ಅಮೃತತ್ವ ಹೊಂದುವುದರಲ್ಲಿ ಸಂದೇಹವಿಲ್ಲ. ಈ ಕಾರಣಕ್ಕಾಗಿಯೋ ಏನೋ ಸ್ವಾಮಿ ವಿರಜಾನಂದರು ತಮ್ಮ ಶ್ರೀರಾಮಕೃಷ್ಣ-ಸ್ತೋತ್ರ-ದಶಕಮ್‌ನಲ್ಲಿ ಹೇಳಿರುವಂತೆ, "ಎಂದಾದರೂ ಒಂದು ದಿನ ಜಪ, ಯಾಗ,ಯೋಗ, ಭೋಗಗಳನ್ನು ಸುಲಭವಾಗಿ ಪಡೆಯಬಹುದು. ಆದರೆ ಶ್ರೀರಾಮಕೃಷ್ಣರ ಮೇಲೆ ಭಕ್ತಿ, ಅನುರಾಗ ಬರುವುದು ಬಹಳ ದುರ್ಲಭ!"

ಆದ್ದರಿಂದ ಈ ಮೇಲೆ ಹೇಳಿರುವಂತಹ ಶ್ರೀರಾಮಕೃಷ್ಣ-ಭೃಂಗದ ಮೇಲೆಯೇ ನಮಗೆ ಅನುರಾಗ, ಭಕ್ತಿಯುಂಟಾಗಲೆಂದು ಪ್ರಾರ್ಥಿಸೋಣ.

**ಶ್ರೀಕಾಳಿಕಾಪದ ಭಕ್ತಿಸುಧಾಮೃತಮಯಂ**
**ನಿರ್ವಿಕಲ್ಪ ಸಮಾಧಿ ಸುಖಿಕೃತ ಝೇಂಕಾರಮ್ |**
**ಸರ್ವಧರ್ಮಾನುಭವ ಮಧುಸಾರ ಸಂಗ್ರಹಂ**
**ತಂ ಶ್ರೀರಾಮಕೃಷ್ಣ ಭೃಂಗಂ ಆಶ್ರಯಾಮಿ ||**

## ತ್ಯಾಗ

**೧೯೩೬ರ ಡಿಸೆಂಬರ್ ೧೨ರಂದು ಪ್ರಿನ್ಸ್ ಎಡ್‌ವರ್ಡ್ VIII ಅಮೆರಿಕದ ಮಹಿಳೆಯನ್ನು ವಿವಾಹವಾಗಲು ಇಂಗ್ಲೆಂಡಿನ ಸಿಂಹಾಸನವನ್ನೇ ತ್ಯಜಿಸಿದನು! ಈ ವಾರ್ತೆಯನ್ನು ಕೇಳಿ ಸ್ವಾಮಿ ವಿಜ್ಞಾನಾನಂದರು, "ನೋಡು, ರಾಜಕುಮಾರನು ಕೇವಲ ಒಂದು ಹೆಣ್ಣಿಗಾಗಿ ಅಪಾರವಾದ ರಾಜ್ಯ, ಧನ, ಕನಕ, ಪದವಿ, ಘನತೆಗಳೆಲ್ಲವನ್ನು ತ್ಯಜಿಸಿದ್ದಾನೆ! ರಾಜ್ಯಕ್ಕಿಂತಲೂ ಆ ಹೆಣ್ಣು ದೊಡ್ಡವಳು ಮತ್ತು ಆ ಹೆಣ್ಣಿಗಿಂತ ದೇವರು ದೊಡ್ಡವನು. ಯಾರು ದೇವರಿಗಾಗಿ ಎಲ್ಲವನ್ನೂ ತ್ಯಜಿಸಬಲ್ಲರು? ದೇವರು ಎಲ್ಲಕ್ಕಿಂತ ದೊಡ್ಡವನು—ಆತನನ್ನು ಪಡೆದ ನಂತರ ಬೇರಾವುದೂ ದೊಡ್ಡದಿಲ್ಲ. ಆದರೆ ದೇವರನ್ನು ಪಡೆಯುವುದು ಬಹಳ ಕಷ್ಟ. ರಾಜಕುಮಾರನ ತ್ಯಾಗವು ಗಮನಾರ್ಹವಾದುದು. ಇವತ್ತು ರಾಜ್ಯವನ್ನು ತ್ಯಾಗ ಮಾಡಿದ್ದಾನೆ, ಬಹುಶಃ ನಾಳೆ ಆ ಹೆಂಗಸನ್ನೂ ತ್ಯಾಗ ಮಾಡಬಹುದು" ಎಂದರು.**

**ಸೇವಕನು ಬಂದು ಪ್ರಣಾಮ ಸಲ್ಲಿಸಿದಾಗ, ಸ್ವಾಮಿಗಳು ವಿನೋದವಾಗಿ "ನೋಡು, ಈ ದಿನ ನಿನಗೆ ಊಟ ದೊರೆಯುವುದಿಲ್ಲ. ರಾಜಕುಮಾರನು ರಾಜ್ಯವನ್ನೇ ತ್ಯಜಿಸಿದ್ದಾನೆ. ನೀನು ಒಂದು ದಿನ ಊಟವನ್ನು ಬಿಡಲಾರೆಯಾ?" ಎಂದರು. ಸೇವಕನು ಆಗಲೆಂದು ತಲೆಯಾಡಿಸಿದ. ವಿಜ್ಞಾನಾನಂದರು ಆ ದಿನ ತ್ಯಾಗದ ಪ್ರಶಂಸೆಯನ್ನು ಮಾಡುತ್ತಲೇ ಇದ್ದರು. "ತ್ಯಾಗವಿಲ್ಲದೆ ಆಧ್ಯಾತ್ಮಿಕ ಜೀವನದಲ್ಲಿ ಕಿಂಚಿತ್ತೂ ಮುಂದುವರಿಯಲಾರೆವು" ಎಂದರು.**